# ಉಡುಪಿಜಿಲ್ಲೆ

## 1.0 ಜಿಲ್ಲೆಯಇತಿಹಾಸ ಹಾಗೂ ಸಂಕ್ಷಿಪ್ತಪರಿಚಯ:

"ಉಡುಪಿ" ಎಂಬುದು "ಉಡುಪ" (TULU: ಒಡಿಪು) ಎಂಬ ಪದದಿಂದ ಬಂದಿದೆ, ಅಂದರೆ ಸಂಸ್ಕೃತದಲ್ಲಿಚಂದ್ರಎಂದರ್ಥ ಮತ್ತುಇದು ಪ್ರಾಚೀನ ಚಂದ್ರಮೌಳೇಶ್ವರ ದೇವಾಲಯದ ಸ್ಥಾಪನೆಯೊಂದಿಗೆ ಸಂಬಂಧ ಹೊಂದಿದೆ. ಭೌಗೋಳಿಕವಾಗಿ ಈ ಪ್ರದೇಶವನ್ನುದಕ್ಷಿಣ ಒಳಗಿನ ಪರ್ಯಾಯ ದ್ವೀಪದಿಂದ ಪಶ್ಚಿಮ ಘಟ್ಟಗಳ ಎತ್ತರದಿಂದ ಬೇರ್ಪಡಿಸಲಾಗಿದೆ. 1997 ರಲ್ಲಿದಕ್ಷಿಣಕನ್ನಡಜಿಲ್ಲೆಯಿಂದಉಡುಪಿ ಜಿಲ್ಲೆಯನ್ನುಕೆತ್ತಲಾಗಿದೆ.

ಜಿಲ್ಲೆಯ ಪ್ರಧಾನಕಛೇರಿಯುಉಡುಪಿಯಾಗಿದೆ ಮತ್ತುಜಿಲ್ಲೆಯುಅದರ ಪ್ರಧಾನಕಛೇರಿಯ ಹೆಸರನ್ನು ಹೊಂದಿದೆ. ದಕ್ಷ ಪ್ರಜಾಪತಿಯಿಂದ ಶಾಪವನ್ನು ನಿವಾರಿಸಲುಉಡುಪ (ಚಂದ್ರಅಥವಾಚಂದ್ರ) ತಪಸ್ಸು ಮಾಡಿಅನುಗ್ರಹ ಪಡೆದ ಸ್ಥಳವನ್ನು ಉಡುಪಿ ಎಂದುಕರೆಯಲಾಗುತ್ತದೆ. ಉಡುಪಿಯು ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸುವ ದೇವಸ್ಥಾನಕ್ಕೆ ಪ್ರಸಿದ್ಧವಾಗಿದೆ. ಈ ಜಿಲ್ಲೆಯುಕರ್ನಾಟಕದ ಪಶ್ಚಿಮ ಕರಾವಳಿಯುದ್ದಕ್ಕೂ ಸಾಗುವ ಪಶ್ಚಿಮ ಘಟ್ಟಗಳ ಬುಡದಲ್ಲಿದೆ.
"ಮೂರು ಮಹಾನ್ಆಚಾರ್ಯರ" ತ್ರಿವಳಿಗಳಲ್ಲಿ ಒಬ್ಬರಾದಉಡುಪಿ (ಪಾಜಕಕ್ಷೇತ್ರ) ಬಳಿ 1238 ೦ಆ ಯಲ್ಲಿ ಜನಿಸಿದ ಮಧ್ವ. ಅವರುದ್ವೈತ ಸಿದ್ಧಾಂತವನ್ನು ಕಲಿಸಿದರು, ಈ ಸಿದ್ಧಾಂತವು ಅನರ್ಹವಾದದ್ವಂದ್ವತೆ ಮತ್ತು ಭಗವಾನ್ ವಿಷ್ಣುವಿಗೆ ಭಕ್ತಿಯಿಂದ ನಿರೂಪಿಸಲ್ಪಟ್ಟಿದೆ. ಅವರುಉಡುಪಿಯಲ್ಲಿ ಶ್ರೀಕೃಷ್ಣನ ಆರಾಧನೆಗಾಗಿಎಂಟು ಪಾಂಟಿಫಿಕಲ್ ಆಸನಗಳನ್ನು ಸ್ಥಾಪಿಸಿದರು, ಅವರದೇವಸ್ಥಾನವನ್ನುಅವರು ನಿರ್ಮಿಸಿದರು ಮತ್ತು "ಉಡುಪಿ ಶ್ರೀ ಕೃಷ್ಣದೇವಸ್ಥಾನ" ಎಂದು ಪ್ರಸಿದ್ಧರಾಗಿದ್ದಾರೆ."ಉಡುಪಿ" ಎಂಬುದು "ಉಡುಪ" (ಜಿಣಟಣ: ಒಡಿಪು) ಎಂಬ ಪದದಿಂದ ಬಂದಿದೆ, ಅಂದರೆ ಸಂಸ್ಕೃತದಲ್ಲಿಚಂದ್ರಎಂದರ್ಥ ಮತ್ತುಇದು ಪ್ರಾಚೀನ ಚಂದ್ರಮೌಳೇಶ್ವರ ದೇವಾಲಯದ ಸ್ಥಾಪನೆಯೊಂದಿಗೆ ಸಂಬಂಧ ಹೊಂದಿದೆ. ಭೌಗೋಳಿಕವಾಗಿ ಈ ಪ್ರದೇಶವನ್ನುದಕ್ಷಿಣ ಒಳಗಿನ ಪರ್ಯಾಯ ದ್ವೀಪದಿಂದ ಪಶ್ಚಿಮ ಘಟ್ಟಗಳ ಎತ್ತರದಿಂದ ಬೇರ್ಪಡಿಸಲಾಗಿದೆ. 1997 ರಲ್ಲಿದಕ್ಷಿಣಕನ್ನಡಜಿಲ್ಲೆಯಿಂದಉಡುಪಿ ಜಿಲ್ಲೆಯನ್ನುಕೆತ್ತಲಾಗಿದೆ.

**ಉಡುಪಿ ಹೆಸರಿನ ನಿಷ್ಪತ್ತಿ:**
ಒಂದು ನಂಬಿಕೆಯ ಪ್ರಕಾರಉಡುಪಿಯ ಹೆಸರು ತುಳುವಿನ ಹೆಸರು "ಒಡಿಪು"ವಿನಿಂದ ಬಂದಿರುವುದಾಗಿ ನಂಬಲಾಗಿದೆ. ಈ ತುಳುವಿನ ಹೆಸರು ಮಲ್ಪೆಕಡಲ ತೀರದಲ್ಲಿರುವಒಡಬಾಂಡೇಶ್ವರದೇವಸ್ಥಾನದಿಂದಾಗಿ ಬಂದಿವುದಾಗಿ ಕೆಲವು ವಿದ್ವಾಂಸರು ಸೂಚಿಸಿದ್ದಾರೆ. ಇನ್ನೊಂದು ನಂಬಿಕೆ ಯ ಪ್ರಕಾರಉಡುಪಿಯ ಹೆಸರು ಸಂಸ್ಕೃತ ಶಬ್ದ "ಉಡು" ಹಾಗೂ "ಪ"ಗಳಿಂದ ಬಂದಿರುವುದಾಗಿ ನಂಬಲಾಗಿದೆ. ಸಂಸ್ಕೃತ ಶಬ್ದ "ಉಡು"ವಿನ ಅರ್ಥ "ನಕ್ಷತ್ರಗಳು" ಹಾಗೂ "ಪ"ವಿನ ಅರ್ಥ "ಒಡೆಯ". ದಂತಕತೆಯ ಪ್ರಕಾರ, ಚಂದ್ರನ ಪ್ರಕಾಶವುಒಂದು ಸಾರಿದಕ್ಷರಾಜನ ಶಾಪದಿಂದಾಗಿಕಡಿಮೆಯಾಯಿತು. ಚಂದ್ರನುದಕ್ಷರಾಜನ 27 ಮಗಳಂದಿರನ್ನು (ಹಿಂದೂಜ್ಯೋತಿಷ್ಯ ಶಾಸ್ತ್ರದ ಪ್ರಕಾರ 27 ನಕ್ಷತ್ರಗಳು) ಮದುವೆಆಗಿದ್ದನು. ಚಂದ್ರ ಹಾಗು ಚಂದ್ರನ ಹೆಂಡತಿಯರುಉಡುಪಿಯ ಚಂದ್ರಮೌಳೀಶ್ವರ ದೇವಸ್ಥಾನದಲ್ಲಿ ಶಿವನನ್ನು ಕುರಿತುತಪಸ್ಸು ಮಾಡಿದ್ದರು. ಶಿವನು ಒಲಿದುಚಂದ್ರನ ಪ್ರಕಾಶವು ಮರಳಿ ಬರುವಂತೆ ಮಾಡಿದನು. ಹಾಗಾಗಿ ನಕ್ಷತ್ರಗಳ ಒಡೆಯ (ಸಂಸ್ಕೃತ: ಉಡುಪ) ತಪಸ್ಸು ಮಾಡಿದ್ದರಿಂದ ಈ ಕ್ಷೇತ್ರಕ್ಕೆಉಡುಪಿ ಎಂಬ ಹೆಸರು ಬಂದಿತೆಂದುಎಂದು ಪ್ರತೀತಿ. ಆದರೆ, ಭಾಷಾಶಾಸ್ತ್ರದದೃಷ್ಟಿಯಿಂದ ನೋಡಿದರೆ, ಒಡಿಪು ಶಬ್ದದಿಂದಉಡುಪಿ ನಿಷ್ಪನ್ನವಾಗಿರುವುದು ಹೆಚ್ಚು ಸಮರ್ಪಕವಾಗಿದೆ. ಈಗಲೂ ತುಳುವಿನಲ್ಲಿ ಈ ಊರನ್ನುಒಡಿಪುಎಂದುಕರೆಯಲಾಗುತ್ತಿರುವುದು ನಿಜಕ್ಕೂ ವಿಶೇಷ.

**ಇತಿಹಾಸ:**
ಉಡುಪಿ ಮತ್ತುದಕ್ಷಿಣಕನ್ನಡ ಜಿಲ್ಲೆಗಳ ಇತಿಹಾಸ ಪರಂಪರೆಯು ಹೆಚ್ಚು ಸಮಾನ ಸ್ವರೂಪದ್ದು. ಇಡೀಕರ್ನಾಟಕದ ಕರಾವಳಿ ಪ್ರದೇಶ ಪರಶುರಾಮ ಸೃಷ್ಟಿಯೆಂದು ಪ್ರತೀತಿಯುಂಟು. ಮಾರ್ಕಂಡೇಯ, ವಾಯು ಮತ್ತು ಭವಿಷ್ಯೋತ್ತರ ಪುರಾಣಗಳು ಇಲ್ಲಿನ ಕೆಲವು ನದಿಗಳ ಮತ್ತು ಪರ್ವತಗಳ ಹೆಸರುಗಳನ್ನು ಉಲ್ಲೇಖಿಸುತ್ತವೆ. ತಮಿಳಿನ ‘ಸಂಗಂ’ ಕಾಲದ ಸಾಹಿತ್ಯದಲ್ಲಿ ತುಳುನಾಡಿನ ಪ್ರಸ್ತಾಪ ಬರುತ್ತದೆ. ಅಶೋಕನ ಶಾಸನಗಳಲ್ಲಿ ಬರುವ ಸಾತಿಯಪುತ್ರಅಥವಾ ಸತ್ಯಪುತ್ರರೆಂಬ ಸಮುದಾಯದಉಲ್ಲೇಖ ಈ ಪ್ರದೇಶದಜನರನ್ನುಕುರಿತದ್ದೆಂದು ಕೆಲವು ಇತಿಹಾಸಕಾರರುಅಭಿಪ್ರಾಯಪಟ್ಟಿದ್ದಾರೆ. ಉಡುಪಿ ಜಿಲ್ಲೆತೀರಪ್ರದೇಶದಲ್ಲಿರುವುದರಿಂದಇದು ಹೊರಗಿನ ಪ್ರಪಂಚದ ಸಂಪರ್ಕವನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಪ್ರಸಕ್ತ ಶಕೆಯಆಚೀಚೆಗಿನ ಶತಮಾನಗಳಿಗೆ ಸೇರಿದಗ್ರೀಕ್ ಮತ್ತುರೋಮನ್ನರ ಪ್ರವಾಸಿ ಕಥನಗಳಲ್ಲಿ ಈ ತೀರದ ಅನೇಕ ಸ್ಥಳಗಳ ಉಲ್ಲೇಖಗಳಿವೆ. ಅವುಗಳಲ್ಲಿ ನೇತ್ರಾವತಿ, ಮಂಗಳೂರು, ಬಸರೂರುಗಳು ಸೇರಿವೆ. ಪ್ರಾಚೀನಕಾಲದಿಂದಲೂ ಹೊರದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಬೆಳೆದುಬಂದದ್ದು ನಿಸ್ಸಂದೇಹ. ಗ್ರೀಕ್ ನಾಟಕವೊಂದರಲ್ಲಿ ಬರುವ ಪಾತ್ರಗಳ ಸನ್ನಿವೇಶ ಈ ಕಡಲತೀರದ್ದೆಂದು ಮತ್ತುಅಲ್ಲಿನ ಸಂಭಾಷಣೆಯಲ್ಲಿ ಬಳಸಿರುವ ಕೆಲವು ಪದಗಳು ತುಳು ಹಾಗೂ ಕನ್ನಡ ಪದಗಳೆಂದು ಗೋವಿಂದ ಪೈಗಳು ಅಭಿಪ್ರಾಯ ಪಟ್ಟಿದ್ದಾರೆ. ಇವು ಹಳಗನ್ನಡ ಪದಗಳೆಂದು ಪ್ರತಿಪಾದಿಸುವವರೂಇದ್ದಾರೆ. ಒಟ್ಟಿನಲ್ಲಿ ಈ ಜಿಲ್ಲೆ ಪ್ರ.ಶ.ಪೂರ್ವ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ ಮತ್ತುಆರ್ಥಿಕ ವ್ಯವಸ್ಥೆಗಳನ್ನು ಹೊಂದಿದ್ದ ಪ್ರದೇಶವೆಂಬುದುದೃಢಪಡುತ್ತದೆ. ಈ ಜಿಲ್ಲೆಯಇತಿಹಾಸಕಾಲದ ಸ್ಪಷ್ಟ ಪುರಾವೆಗಳು ದೊರಕುವುದು ಆಳುಪರ ಕಾಲದಲ್ಲಿ. ಆಳುಪರ ಆಳ್ವಿಕೆ ಪ್ರಸಕ್ತ ಶಕಾರಂಭದ ಕಾಲಕ್ಕೇ ಪ್ರಾರಂಭವಾಗುತ್ತದೆಂದು ತಿಳಿದು ಬರುತ್ತದೆ. ಅವರು ನಾಗಾರಾಧಕರಾಗಿದ್ದರು ಮತ್ತು ಶೈವ ಪಂಥೀಯರಾಗಿದ್ದರು. ಕದಂಬರು ನೆರೆಯಉತ್ತರಕನ್ನಡಜಿಲ್ಲೆಯ ಬನವಾಸಿಯಲ್ಲಿ ರಾಜ್ಯ ಸ್ಥಾಪಿಸಿದ ಮೇಲೆ ಈ ಪ್ರದೇಶವೂಅವರ ಸಾರ್ವಭೌಮತ್ವಕ್ಕೆ ಒಳಪಟ್ಟಿತ್ತು. ಆಗ ಅವರುಇಲ್ಲಿಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಸಿ ಇಲ್ಲಿನ ಮಠ ಮತ್ತುಅಗ್ರಹಾರ ಪರಂಪರೆಗೆ ಬುನಾದಿ ಹಾಕಿದರೆಂದು ಹೇಳಲಾಗಿದೆ. ಜಮೀನು ಸಾಗುವಳಿ ಮತ್ತು ನಿರ್ವಹಣೆಯಲ್ಲಿ ಅನೇಕ ಕಟ್ಟುಪಾಡುಗಳನ್ನು ಕದಂಬರುತಂದರೆಂಬ ನಂಬಿಕೆಯಿದೆ. ಕದಂಬರ ಪ್ರಾಬಲ್ಯ ಕಡಿಮೆಯಾಗಿ ಬಾದಾಮಿ ಚಾಳುಕ್ಯರು ಮತ್ತುತಲಕಾಡಿನಗಂಗರು ಈ ಪ್ರದೇಶದ ಮೇಲೆ ನಿಯಂತ್ರಣ ಸಾದಿಸಿದಾಗ ಆಳುಪರು ಅವರೊಂದಿಗೆಉತ್ತಮ ಬಾಂಧವ್ಯಇಟ್ಟುಕೊಂಡುತಮ್ಮರಾಜ್ಯವನ್ನು ವಿಸ್ತರಿಸಿದರು. ಆಳುಪರನ್ನು ಸೋಮ ಕುಲದವರೆಂದೂ ಮೀನ ಲಾಂಛನದವರೆಂದೂ ಹೇಳಲಾಗಿದೆ. ಇವರು 6ನೇಯ ಶತಮಾನದ ಹೊತ್ತಿಗೆಉಡುಪಿ

| | |
|---|---|
| | ಜಿಲ್ಲೆಯಉದಯಪುರ(ಉದ್ಯಾವರ) ಮಂಗಳಪುರ (ಮಂಗಳೂರು)ಗಳಲ್ಲಿ ರಾಜಧಾನಿಗಳನ್ನು ಸ್ಥಾಪಿಸಿ ಆಳಿದ್ದರಲ್ಲದೆ ಘಟ್ಟದ ಮೇಲಿನ ಕೆಲವು ಭಾಗಗಳ ಮೇಲೂ ಆಳ್ವಿಕೆ ಸ್ಥಾಪಿಸಿದರು. ಪಶ್ಚಿಮ ಚಾಲುಕ್ಯರ ಬೆಂಬಲದೊಂದಿಗೆಅವರು 8ನೆಯ ಶತಮಾನದವರೆಗೂ ಆಳ್ವಖೇಡ, ಬನವಾಸಿ ಮಂಡಲ ಮತ್ತು ಹೊಂಬುಚರ್ಚ್ (ಹೊಸನಗರತಾಲ್ಲೂಕು) ಪ್ರಾಂತ್ಯಗಳನ್ನು ಆಳಿದರೆಂದು ಹೇಳಬಹುದು. ಉಡುಪಿ ಜಿಲ್ಲೆಯ ಬಾರಹಕನ್ಯಾಪುರಅಥವಾ ಬಾರಕೂರುಇವರ ರಾಜಧಾನಿಗಳಲ್ಲೊಂದಾಗಿತ್ತು. ರಾಷ್ಟ್ರಕೂಟರಕಾಲದಲ್ಲಿಇವರ ಪ್ರಭಾವತಗ್ಗಿತ್ತು. ಗಂಗರಿಗೆಇವರು ನಾಮಮಾತ್ರಅಧೀನತೆ ತೋರಿಸಿ ಅವರೊಂದಿಗೆರಕ್ತಸಂಬಂಧ ಮಾಡುವ ಮೂಲಕ ಸೌಹಾರ್ದ ಬಾಂಧವ್ಯ ಹೊಂದಿದ್ದರು. ಇವರು ಕೆಲವೆಡೆತಮ್ಮನ್ನು ಪಾಂಡ್ಯರೆಂದುಕರೆದುಕೊಂಡಿದ್ದಾರೆ. ಮೀನು ಇವರ ಲಾಂಛನವಾಗಿತ್ತು. ಹೊಯ್ಸಳರು ಪ್ರಾರಂಭದಲ್ಲಿ ಆಳುಪರ ಮೇಲೆ ಸಾಂಕೇತಿಕಆಧಿಪತ್ಯ ಹೊಂದಿದ್ದರೂ ಮೂರನೆಯ ಬಲ್ಲಾಳನ ಕಾಲದಲ್ಲಿ ಈ ಪ್ರದೇಶದ ಆಗುಹೋಗುಗಳಲ್ಲಿ ಅವರು ಹೆಚ್ಚಾಗಿ ಭಾಗವಹಿಸಿದ್ದು ಕಂಡುಬರುತ್ತದೆ. ಉಡುಪಿ ಮತ್ತುದಕ್ಷಿಣಕನ್ನಡಜಿಲ್ಲೆ ಮುಖ್ಯವಾಗಿ ಶೈವ ಪರಂಪರೆ ಹೊಂದಿದ್ದ ಪ್ರದೇಶಗಳು. ನಾಗಾ ರಾಧನೆ ಮತ್ತು ಶಿವ ಪೂಜೆಇಲ್ಲಿನ ಮೂಲ ಧಾರ್ಮಿಕ ಪರಂಪರೆಯ ಸ್ವರೂಪವಾಗಿತ್ತು. ತರುವಾಯ ವೈಷ್ಣವ ಪಂಥ ಪ್ರವೇಶಿಸಿತು. ಮಧ್ವಚಾರ್ಯರು 13ನೆಯ ಶತಮಾನದಲ್ಲಿಉಡುಪಿ ಯಲ್ಲಿ ಅಷ್ಟಮಠಗಳನ್ನು ಸ್ಥಾಪನೆ ಮಾಡಿದ ಮೇಲೆ ಮಾಧ್ವ ವೈಷ್ಣವಮತ ಪ್ರಬಲವಾಯಿತು. ಜೈನಧರ್ಮ ಪ್ರಾರಂಭದಿಂದಲೂರಾಜಾಶ್ರಯ ಪಡೆದಿದ್ದು 18ನೆಯ ಶತಮಾನದವರೆಗೂ ಕ್ರಿಯಾಶೀಲ ಧರ್ಮವಾಗಿ ಬೆಳೆಯಿತು. ಸ್ಥಳೀಯ ಪಂಜರವಳ್ಳಿ, ಭೂತ ಮೊದ ಲಾದ ಶಕ್ತಿಗಳ ಆರಾಧನೆ ಪ್ರಾರಂಭದಿಂದಲೂ ನಡೆದುಬಂದಿದೆ. ಪಾರ್ವತಿಯಅವತಾರವಾದ ಶಕ್ತಿ ದೇವತೆಗಳ ಆರಾಧನೆ (ಉದಾ: ಕೊಲ್ಲೂರು ಮೂಕಾಂಬಿಕೆ) ಜನಪ್ರಿಯವಾಗಿದೆ. ಈ ಪ್ರಾಂತದಜನರಿಗೆಧರ್ಮಶ್ರದ್ಧೆ ಹೆಚ್ಚು. ಭೂತಾರಾಧನೆಯಾಗಲೀಕೃಷ್ಣಪೂಜೆಯಾಗಲೀ ಹೋಮ ಹವನಗಳಾಗಲೀ ಎಲ್ಲದರಲ್ಲೂಇವರಿಗೆ ಹೆಚ್ಚಿನ ನಿಷ್ಠೆ. ವಿಜಯನಗರದ ಆಳ್ವಿಕೆ ಪ್ರಾರಂಭವಾದಾಗ ಹಿಂದಿನ ಪಾಳೆಯಗಾರರ ಅಥವಾ ಸ್ಥಾನಿಕ ರಾಜರ ಆಳ್ವಿಕೆಯ ಪ್ರಭಾವತಗ್ಗಿತು. ಆ ಕಾಲದಲ್ಲಿ ವಿಜಯನಗರದ ಸಾಮ್ರಾಟರು ನೇರವಾಗಿತಮ್ಮ ಪ್ರಾಂತಾದಿಕಾರಿಗಳ ಮೂಲಕ ಆಳ್ವಿಕೆ ನಡೆಸಲು ಪ್ರಾರಂಬಿಸಿದರು. ಬಾರಕೂರು ಮತ್ತು ಮಂಗಳೂರು ಈ ಆಡಳಿತ ಕೇಂದ್ರಗಳಾಗಿದ್ದವು. ಮಂಗಳೂರು ರಾಜ್ಯವೆಂದೇ ಈ ಪ್ರಾಂತ್ಯವನ್ನುಕರೆಯುತ್ತಿದ್ದರು. 1342ರಲ್ಲಿ ಈ ಮಾರ್ಗವಾಗಿ ಹಾದುಹೋದಇಬ್ನಬೂತೂತ ರಾಜ್ಯಾದಿಕಾರಿಗಳು ಆಗಾಗ ಬದಲಾಗುತ್ತಿದ್ದುದರ ಬಗ್ಗೆ ತಿಳಿಸಿದ್ದಾನೆ. ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮಉಡುಪಿಯ ಬಳಿಯ ದ್ವೀಪಗಳಿಗೆ ಭೇಟಿಕೊಟ್ಟಿದ್ದನೆಂದು ತಿಳಿದುಬರುತ್ತದೆ. ಈಗ ಆ ದ್ವೀಪಗಳು ಸಂತಮೇರಿ ದ್ವೀಪಗಳೆಂದು ಹೆಸರು ಪಡೆದಿವೆ.<br><br>ವಿಜಯನಗರದಕೃಷ್ಣದೇವರಾಯ ಪೋರ್ಚುಗೀಸರೊಂದಿಗೆ ಹೆಚ್ಚಿನ ಸ್ನೇಹದಿಂದ ನಡೆದುಕೊಂಡ. ಆಗ ಪೋರ್ಚುಗೀಸರು ಕರಾವಳಿಯ ಬಂದರುಗಳಲ್ಲಿ ವ್ಯಾಪಾರದ ನೆಪದಲ್ಲಿ ಬಲವಾಗಿ ನೆಲೆಗೊಂಡರು. ಉಳ್ಳಾಲದ ರಾಣಿಅಬ್ಬಕ್ಕದೇವಿ ಮತ್ತು ಬಿದನೂರಿನ ನಾಯಕರು ವಿಜಯನಗರದ ಪತನದಅನಂತರ ಪೋರ್ಚುಗೀಸ್ರನ್ನು ಹತೋಟಿಯಲ್ಲಿಡಲು ಅನೇಕ ಕಾರ್ಯಾಚರಣೆಗಳನ್ನು ನಡೆಸಿದರು. ಬಿದನೂರ ನಾಯಕರು ಮಲ್ಪೆ ಮತ್ತು ಕುಂದಾಪುರಗಳಲ್ಲಿ ಕೋಟೆಗಳನ್ನು ನಿರ್ಮಿಸಿದರು. ಅನೇಕ ದಂಡರಸರು ವಿಜಯನಗರಕಾಲದಲ್ಲಿ ಮುಂದುವರೆದಿದ್ದುಅನಂತರ ಪ್ರಬಲರಾಗಿ ಈ ಪ್ರದೇಶದಲ್ಲಿ ಆಳಿದರು. ಅವರಲ್ಲಿ ಕಾರ್ಕಳದ ಭೈರರಸರು ಮತ್ತು ವೇಣೂರಿನಅಜಿಲರು ಪ್ರಮುಖರು. ಇವರಕಾಲದಲ್ಲಿ ಈ ಊರುಗಳಲ್ಲಿ ಅನೇಕ ಜೈನ ಬಸದಿಗಳು ವಿಶ್ವವಿಖ್ಯಾತಗೊಮ್ಮಟ ವಿಗ್ರಹಗಳು ನಿರ್ಮಾಣವಾದವು. ಉಡುಪಿಯ ಬಳಿ ಸುರಳದಲ್ಲಿ ತೊಳಹಾರರು ಮತ್ತು ಹೊನ್ನಕಂಬಳಿ ಅರಸರು ಆಳುತ್ತಿದ್ದರು. ಉತ್ತರಕನ್ನಡಜಿಲ್ಲೆಯ ಹಾಡುವಳ್ಳಿಯಿಂದ ಆಳುತ್ತಿದ್ದ ಅರಸರುಉಡುಪಿ ಜಿಲ್ಲೆಯಉತ್ತರದ ಕೆಲವು ಭಾಗಗಳಲ್ಲಿ ಆಡಳಿತ ನಡೆಸಿದರು. ಮೈಸೂರುರಾಜ್ಯದ ಹೈದರಾಲಿ ಮತ್ತುಟಿಪ್ಪುಸುಲ್ತಾನರು ಈ ಇಡೀ ಕರಾವಳಿ ಭಾಗವನ್ನುಗೆದ್ದಕೊಂಡರು. ಆದರೆಇಂಗ್ಲಿಷರ ಪ್ರಬಲ ಪ್ರತಿರೋಧದಿಂದಾಗಿ 1792ರ ಯುದ್ಧದಲ್ಲಿಅನಂತರದಒಪ್ಪಂದದ ಮೇರೆಗೆ ಈ ಭಾಗ ಬ್ರಿಟಿಷರ ವಶವಾಯಿತು. ಟಿಪ್ಪುಸುಲ್ತಾನನುಇಲ್ಲಿನ ಅನೇಕ ಸ್ಥಳೀಯ ರಾಜರನ್ನು ಪದಚ್ಯುತಿಗೊಳಿಸಿದ್ದ. 1837ರಲ್ಲಿ ಕಲ್ಯಾಣಸ್ವಾಮಿ ಮತ್ತು ಲಕ್ಷ್ಮಪ್ಪ ಬಂಗೇಶ ಎಂಬ ಅರಸುಗಳು ಬ್ರಿಟಿಷರ ವಿರುದ್ಧದಂಗೆಯೆದ್ದರು. ಬ್ರಿಟಿಷರು ಈ ದಂಗೆಯನ್ನು ಅಡಗಿಸಿದರು. 1860ರಲ್ಲಿ ಕನ್ನಡಜನರಿದ್ದ ಕರಾವಳಿ ಪ್ರದೇಶವನ್ನುಉತ್ತರಕನ್ನಡಜಿಲ್ಲೆ ಮತ್ತುದಕ್ಷಿಣಕನ್ನಡ ಜಿಲ್ಲೆಗಳೆಂದು ವಿಭಜಿಸಲಾಯಿತು. 1867ರಲ್ಲಿ ಮೊದಲನೆಯದನ್ನು ಮುಂಬಯಿ ಪ್ರಾಂತ್ಯಕ್ಕೂಎರಡನೆಯದನ್ನು ಮದರಾಸು ಪ್ರಾಂತ್ಯಕ್ಕೂ ಸೇರಿಸಲಾಯಿತು. ಬ್ರಿಟಿಷ್ ಭಾರತದ ಭಾಗವಾಗಿದ್ದ ಈ ಕರಾವಳಿ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಮುಂದಿತ್ತು. |
| | |
| 2.0 | **ಭೌಗೋಳಿಕ ನೆಲೆ :** |
| | ಈ ಜಿಲ್ಲೆಯ ಪೂರ್ವಗಡಿಯುದ್ದಕ್ಕೂಎತ್ತರವಾದ ಮತ್ತುದಟ್ಟವಾದಕಾಡಿನಿಂದಕೂಡಿದ ಪಶ್ಚಿಮ ಘಟ್ಟದ ಶ್ರೇಣಿಗಳಿವೆ. ಅಲ್ಲಲ್ಲಿಎತ್ತರವಾದ ಗಿರಿಶಿಖರಗಳು ಮತ್ತು ಮಧ್ಯೆ ಮಧ್ಯೆ ಕಂದರಗಳಿಂದ ಕೂಡಿರುವ ಭೂದೃಶ್ಯರುದ್ರರಮಣೀಯವಾಗಿವೆ. ಸಹ್ಯಾದ್ರಿ ಘಟ್ಟಗಳ ಶ್ರೇಣಿಗಳ ನಡುವೆಇರುವ ಆಗುಂಬೆ ಘಾಟ್‌ರಸ್ತೆಯುಕರ್ನಾಟಕದ ಮೈದಾನ ಪ್ರದೇಶದೊಂದಿಗೆ ಸಂಪರ್ಕಮಾರ್ಗವಾಗಿದೆ. ಕಾರ್ಕಳದ ಮೂಲಕ ದಕ್ಷಿಣಕನ್ನಡಜಿಲ್ಲೆಯಗಡಿಯನ್ನು ಸೇರಿ ಮುಂದೆ ಶೃಂಗೇರಿ ಮತ್ತು ಕುದುರೆಮುಖಗಳತ್ತ ಕವಲಾಗಿ ಹೋಗುವ ಹೆದ್ದಾರಿ ಈ ಪ್ರದೇಶದಇನ್ನೊಂದು ಪ್ರಮುಖ ಮಾರ್ಗ. ಆಗುಂಬೆಗೆ ಉತ್ತರದಲ್ಲಿರುವಕೊಡಚಾದ್ರಿ ಬೆಟ್ಟ ಈ ಜಿಲ್ಲೆಯಅತ್ಯಂತಎತ್ತರದ ಶಿಖರ (1341ಮೀ) ಇದು ಪ್ರವಾಸಿಗಳ ಆಕರ್ಷಣೀಯತಾಣವೂ ಹೌದು. ನದಿಗಳು ತೊರೆಗಳು ಮತ್ತು ನಿತ್ಯಹಸಿರು ಕಾಡುಗಳಿಂದ ಕೂಡಿರುವ ಈ ಭಾಗದ ಪ್ರಕೃತಿತುಂಬಾರಮ್ಯವಾಗಿದೆ. ಘಟ್ಟದಿಂದ ಕೆಳಗೆ ಪಶ್ಚಿಮಾಭಿಮುಖವಾಗಿ ಬಂದಂತೆಲ್ಲಾ ಮೈದಾನ ಪ್ರದೇಶತೆರೆದು ಕೊಳ್ಳುತ್ತದೆ. ಅಷ್ಟೇನೂಕಡಿದಾಗಿರದ ಇಳಿಜಾರಿನ ಪ್ರದೇಶದಲ್ಲಿಅಲ್ಲಲ್ಲಿಎತ್ತರದಗುಡ್ಡಬೆಟ್ಟಗ ಳುಂಟು. ವ್ಯವಸಾಯದಜಮೀನಿನಲ್ಲಿ ಗದ್ದೆಗಳು, ತೆಂಗು, ಅಡಕೆ, ಗೋಡಂಬಿ ತೋಟಗಳಿವೆ. ಕೆಲವೆಡೆಕೆಮ್ಮಣ್ಣಿನಿಂದಕೂಡಿದ ಬರಡು ದಿಣ್ಣೆಗಳಿವೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ನೆಲ ಕಡಿಮೆಯೇ. ಜಿಲ್ಲೆಯತೀರಪ್ರದೇಶಅತ್ಯಂತ ಮುಖ್ಯವಾದ ಭಾಗ. ಇಲ್ಲಿಯಜನಸಾಂದ್ರತೆಅಧಿಕ. ಇದುಆರ್ಥಿಕ ಚಟುವಟಿಕೆಗಳಿಂದ ಕೂಡಿದ ಪ್ರದೇಶ. ಇಲ್ಲಿಯತೀರ ಪ್ರದೇಶದ ಅಂಚು ಸಾಮಾನ್ಯವಾಗಿ |

| | |
|---|---|
| | ನೇರವಾಗಿದೆ. ನದಿಗಳು ಸಮುದ್ರ ಸೇರುವ ಎಡೆಗಳಲ್ಲಿ ಕೊಲ್ಲಿಗಳುಂಟಾಗಿವೆ. ಸಮುದ್ರದ ಹಿನ್ನೀರಿನ ಪ್ರದೇಶಗಳು ಮೀನುಗಾರಿಕೆಗೆ ಮತ್ತುದೋಣಿಗಳ ಸಂಚಾರಕ್ಕೆಉಪಯುಕ್ತವಾಗಿವೆ. ಬೈಂದೂರು,ಗಂಗೊಳ್ಳಿ, ಕುಂದಾಪುರ, ಮಲ್ಪೆ, ಪಡುಬಿದರೆ ಮೊದಲಾದ ಪಟ್ಟಣಗಳು ಮೀನುಗಾರಿಕೆಗೆ ಮತ್ತು ವ್ಯಾಪಾರದಿಂದಾಗಿಅಭಿವೃದ್ಧಿಗೆ ಬಂದಿವೆ. ಮಲ್ಪೆ ಬಳಿ ಸಂತ ಮೇರಿ ದ್ವೀಪ ಸಮೂಹವಿದೆ. ತೀರದಲ್ಲಿ ವಿರಳವಾಗಿರುವ ದ್ವೀಪಗಳಲ್ಲಿ ಈ ದ್ವೀಪಸಮೂಹ ಪ್ರಮುಖವಾದದ್ದು. ಜಿಲ್ಲೆಯ ಭೂಶಿಲಾರಚನೆಯನ್ನು ಮುಖ್ಯವಾಗಿಧಾರವಾಡ ಶಿಲಾವರ್ಗ, ಮಧ್ಯಂತರ ಸೇರ್ಪಡೆಗಳು ಮತ್ತುಈಚಿನ ರಚನೆಗಳು ಎಂದು ವಿಂಗಡಿಸಬಹುದು. ಧಾರವಾಡ ಶಿಲಾವರ್ಗದಲ್ಲಿ ರೂಪಾಂತರಗೊಂಡ ಅನೇಕ ಪ್ರಾಚೀನ ಶಿಲೆಗಳಿವೆ. ಇವುಗಳಲ್ಲಿ ಮುಖ್ಯವಾಗಿ ಪದರ ಪದರವಾದಕಬ್ಬಿಣ ಮಿಶ್ರಿತವಾದ ಕ್ವಾರ್ಟ್ಸೈಟ್ ಮತ್ತುಟಾಲ್ಕ್ ಹಾಗೂ ಹಾರ್ನ್ಬ್ಲೆಂಡ್ ಶಿಷ್ಟ್‌ಗಳು ಕಂಡುಬರುತ್ತವೆ. ಹಾರ್ನ್ಬ್ಲೆಂಡ್ ಹೊಡೆಪೊರೆಗಳು ಅಲ್ಲಲ್ಲಿ ವಿರಳವಾಗಿ ಕಾಣಸಿಗುತ್ತವೆ. ಜಂಬುಕಲ್ಲು ಕರಾವಳಿ ಪ್ರದೇಶದಲ್ಲಿ ಬಹುಮಟ್ಟಿಗೂ ಒಳಭಾಗದಲ್ಲಿ ಸ್ವಲ್ಪಮಟ್ಟಿಗೂಇದೆ. ಕರಾವಳಿಯಲ್ಲಿ ಕಂಡುಬರುವ ಮೆಕ್ಕಲು, ಜೇಡಿ ಮತ್ತು ಸುಣ್ಣಕಲ್ಲು ಪದರಗಳು ಈಚಿನ ರಚನೆಗಳಾಗಿವೆ. |
| | |
| 3.0 | **ಮಣ್ಣು :**<br>ಜಿಲ್ಲೆಯು ಮೂರು ವಿಧದ ಮಣ್ಣಿನಿಂದಆವೃತವಾಗಿದೆ 1) ಮರಳು ಮಣ್ಣು ಆವರಿಸಿದೆಕಡಲತೀರಗಳು 2) ಹಳದಿ ಲೋಮಮಿ ಮಣ್ಣು ಮತ್ತು 3) ಕೆಂಪು ಲ್ಯಾಟರಿಟಿಕ್ ಮಣ್ಣು.<br>ಮರಳಿನ ಮಣ್ಣುಕಡಲತೀರದಕಿರಿದಾದ ಪಟ್ಟಿಗೆ 100 ಮೀ ನಿಂದಒಂದುಕಿಲೋಮೀಟರ್ ವರೆಗೆ ಸೀಮಿತವಾಗಿದ್ದು<br>ಹಳದಿ ಲೋಮಮಿ ಮಣ್ಣು ಹೆಚ್ಚಾಗಿ ನದಿ ತೀರದಲ್ಲಿ ಮತ್ತು ಕಣಿವೆಗಳ ಕೆಳಭಾಗದ ಉದ್ದಕ್ಕೂ ಸೀಮಿತವಾಗಿದ್ದು. ಅವುಗಳನ್ನು ಹೆಚ್ಚಾಗಿ ಟೈಲ್‌ಗಾಗಿ ಬಳಸಲಾಗುತ್ತದೆ. ಕೆಂಪು ಲ್ಯಾಟರಿಟಿಕ್ ಮಣ್ಣು ಈ ಪ್ರದೇಶದಲ್ಲಿಅತ್ಯಂತ ಪ್ರಬಲವಾದ ಮಣ್ಣಿನ ವಿಧವಾಗಿದೆ. ಈ ಮಣ್ಣು ಕಣಿವೆಗಳಲ್ಲಿ ಮತ್ತು ಇಳಿಜಾರುಗಳು ಮಣ್ಣಿನಿಂದ ಸಮೃದ್ಧವಾಗಿವೆ. |
| | |
| 4.0 | **ನದಿಗಳು :**<br>ಇಲ್ಲಿಯ ಭೌಗೋಳಿಕ ಸನ್ನಿವೇಶ ಹಾಗೂ ವಾಯುಗುಣದಿಂದಾಗಿಇಲ್ಲಿ ಹೆಚ್ಚಿನ ಜಲಸಂಪನ್ಮೂಲವಿದೆ. ನೈರುತ್ಯ ಮಾರುತಗಳು ಇಲ್ಲಿನತೀರ ಮತ್ತುಘಟ್ಟ ಪ್ರದೇಶದಲ್ಲಿ ಹೇರಳವಾಗಿ ಮಳೆ ಸುರಿಸುತ್ತವೆ. ಜೂನ್ ತಿಂಗಳಿಂದ ಸೆಪ್ಟೆಂಬರ್ ವರೆಗಿನ ಮುಂಗಾರಿನಕಾಲದಲ್ಲಿ ಬರುವ ಮಳೆಯಿಂದಾಗಿ ಪಶ್ಚಿಮ ಘಟ್ಟಗಳಲ್ಲಿ ಅನೇಕ ನದಿತೊರೆಗಳು ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದುಬರುತ್ತವೆ. ಇವುಗಳ ಉದ್ದಕಡಿಮೆಯಾದರೂ ನೀರುಅಧಿಕವಾಗಿರುತ್ತದೆ.<br>ಗಂಗೊಳ್ಳಿ ನದಿಯು (ಕುಂದಾಪುರದ ಬಳಿ) ಐದು ಉಪ ಹೊಳೆಗಳನ್ನು ಕೂಡಿಕೊಂಡು ಸಮುದ್ರಸೇರುವುದರಿಂದ ಈ ಸ್ಥಳವನ್ನು ಪಂಚಗಂಗಾವಳಿ ಎಂದುಕರೆಯುತ್ತಾರೆ. ಇಲ್ಲಿ ವಿಸ್ತಾರವಾದ ಅಳಿವೆ ಇದೆ. ಇಲ್ಲಿ ಬಂದರುಇದೆ. ಗುರುಪುರ, ಸ್ವರ್ಣ, ಸೀತಾ, ವಾರಾಹಿ, ಚಕ್ರಾ ಮತ್ತುಕೊಲ್ಲೂರು ನದಿಗಳು ಮುಖ್ಯವಾದವು. ಸೀತಾನದಿ ಮತ್ತು ಸ್ವರ್ಣನದಿಗಳು ಬಾರಕೂರು ಬಳಿ ಒಟ್ಟುಗೂಡಿ ಸಮುದ್ರ ಸೇರುತ್ತವೆ. ಈ ಎಲ್ಲ ನದಿಗಳು ಸೇರುವ ಹಿನ್ನೀರು ಪ್ರದೇಶ ದೋಣಿಗಳ ಸಂಚಾರಕ್ಕೆಅನುಕೂಲಕರವಾಗಿದೆ. ಜಿಲ್ಲೆಯಲ್ಲಿ ಜಲಸಂಪತ್ತು ಹೇರಳವಾಗಿದ್ದರೂ ಅದು ವ್ಯವಸಾಯಕ್ಕೆಉಪಯೋಗವಾಗುವುದಕ್ಕಿಂತ ಸಮುದ್ರಕ್ಕೆ ಹರಿದುಹೋಗುವುದೇ ಹೆಚ್ಚು. ಕಾರ್ಕಳ ತಾಲ್ಲೂಕಿನ ಭಂಡಾಜಿ ಜಲಪಾತದಲ್ಲಿ ನೀರು 700ಮೀ ಗಳ ಎತ್ತರದಿಂದಧುಮುಕುತ್ತದೆ. ಇದರೊಂದಿಗೆತಾಲ್ಲೂಕಿನರಾಮಸಾಗರ ಸರೋವರ ಮುಖ್ಯಆಕರ್ಷಣೆಯಾಗಿವೆ. |
| | |
| 5.0 | **ಹವಾಮಾನ ಹಾಗೂ ಮಳೆಯ ಪ್ರಮಾಣ :**<br>ಈ ಪ್ರದೇಶವು ಸರಾಸರಿಉಷ್ಣತೆಯೊಂದಿಗೆ ವಿಶಿಷ್ಟವಾದ ಸಮುದ್ರ ಹವಾಮಾನವನ್ನುಅನುಭವಿಸುತ್ತದೆ<br>26.5 ಅ ಸೆ. ಉಡುಪಿ ಜಿಲ್ಲೆಯುಕರ್ನಾಟಕರಾಜ್ಯದಲ್ಲಿಅತಿಹೆಚ್ಚು ವಾರ್ಷಿಕ ಮಳೆ ಬೀಳುತ್ತದೆ, ಸುಮಾರು 4000<br>ಮಿಮೀ ಈ ಕರಾವಳಿ ಜಿಲ್ಲೆಯಲ್ಲಿ, ಹೆಚ್ಚಿನ ಪ್ರಮಾಣದ ಮಳೆ ಅಂದರೆ. 85% ಕ್ಕಿಂತ ಹೆಚ್ಚು ಮಳೆಗಾಲದಲ್ಲಿ ಸಂಭವಿಸುತ್ತದೆ<br>ತುಉಡುಪಿ ಜಿಲ್ಲೆಯ 3575 ಚದರ ಕಿಮೀ ಪ್ರದೇಶವು 3 ಮಳೆ ಮಾಪನ ಕೇಂದ್ರಗಳನ್ನು ಹೊಂದಿದೆ (1<br>ನಿಲ್ದಾಣ/1199 ಚದರ ಕಿಮೀ) ಮಳೆಯ ತಾತ್ಕಾಲಿಕ ವ್ಯತ್ಯಾಸವು 3 ರಿಂದ 4 ತಿಂಗಳುಗಳಿಗೆ ಸೀಮಿತವಾಗಿರುತ್ತದೆ<br>ಒಂದು ವರ್ಷ. ಮಳೆಯು ಪಶ್ಚಿಮದಿಂದ ಪೂರ್ವಕ್ಕೆ ಹೆಚ್ಚಾಗುತ್ತದೆ ಮತ್ತು ವ್ಯತ್ಯಾಸದ ಸಹ-ದಕ್ಷತೆಯೊಂದಿಗೆ ಹೆಚ್ಚಾಗುತ್ತದೆ<br>18.7 ರಿಂದ 18.9%ವರೆಗೆ. ಸರಾಸರಿ ವಾರ್ಷಿಕ ಮಳೆ 4136.3 ಮಿಮೀ. |
| | |

| | |
|---|---|
| ೬.೦ | **ಜಿಲ್ಲೆಯ ಸಂಕ್ಷಿಪ್ತ ನೋಟ:**<br><br>1. ಕ್ಷೇತ್ರ :<br>1) ಉಡುಪಿ<br>2) ಕಾರ್ಕಳ<br>3) ಕುಂದಾಪುರ<br>4) ಬೈಂದೂರು<br>5) ಕಾಪು<br><br>2. ಪ್ರಮುಖ ನದಿಗಳು:<br>1) ಗಂಗೊಳ್ಳಿ<br>2) ಗುರುಪುರ<br>3) ಸ್ವರ್ಣ<br>4) ಸೀತಾ<br>5) ವಾರಾಹಿ<br>6) ಚಕ್ರಾ<br>7) ಕೊಲ್ಲೂರು<br><br>3. ಜಿಲ್ಲೆಯಲ್ಲಿರುವ ತಾಲ್ಲೂಕುಗಳ ಸಂಖ್ಯೆ ಹಾಗೂ ಹೆಸರು :<br>1) ಉಡುಪಿ<br>2) ಕಾರ್ಕಳ<br>3) ಕುಂದಾಪುರ<br>4) ಬ್ರಹ್ಮಾವರ<br>5) ಬೈಂದೂರು<br>6) ಕಾಪು<br>7) ಹೆಬ್ರಿ<br><br>4. ನಗರ/ಪಟ್ಟಣಗಳ ಸಂಖ್ಯೆ :<br>1) ಉಡುಪಿ<br>2) ಕಾರ್ಕಳ<br>3) ಕುಂದಾಪುರ<br><br>5. ಗ್ರಾಮ ಪಂಚಾಯತಿಗಳ ಸಂಖ್ಯೆ :<br>146 ಗ್ರಾಮ ಪಂಚಾಯತಿ<br><br>6. ಜನವಸತಿಯುಳ್ಳ ಗ್ರಾಮಗಳ ಸಂಖ್ಯೆ :<br>267 ಜನವಸತಿಯುಳ್ಳ ಗ್ರಾಮ<br><br>7. ವಾರ್ಷಿಕ ಸರಾಸರಿ ಮಳೆಯ ಪ್ರಮಾಣ :<br>4136.3 ಮಿಮೀ |
| | |
| ೭.೦ | **ಜನ ಸಂಖ್ಯೆ ವಿವರ.**<br><br>1. ಒಟ್ಟುಜನ ಸಂಖ್ಯೆ :1,177,361<br><br>2. ಪುರುಷರು :562,131 |

| | |
|---|---|
| | 3. ಮಹಿಳೆಯರು :615,230<br><br>4. ನಗರವಾಸಿಗಳ ಸಂಖ್ಯೆ : 843344<br><br>5. ಗ್ರಾಮವಾಸಿಗಳ ಸಂಖ್ಯೆ : 334017<br><br>6. ಅಕ್ಷರಸ್ಥರ ಸಂಖ್ಯೆ : 926471<br><br>7. ಅಕ್ಷರಸ್ಥರ ಪ್ರಮಾಣ : 926471<br><br>ಪುರುಷರು : 465725<br><br>ಮಹಿಳೆಯರು : 460746 |
| | |
| 8.0 | **ನೋಂದಾಯಿತ ನಿರುದ್ಯೋಗಿಗಳ ಸಂಖ್ಯೆ:**15074 |
| | |
| 9.0 | **ಸಾರಿಗೆ ಸೌಕರ್ಯಗಳ ವಿವರ.**<br><br>1. ರೇಲ್ವೆಜಾಲದಉದ್ದ : 49 ಕಿ. ಮೀ.<br><br>2. ಹೆದ್ದಾರಿ ರಸ್ತೆಗಳ ಉದ್ದ143ಕಿ. ಮೀ. (ಓಊ 66)<br>52 ಕಿ. ಮೀ. (ಓಊ 1690)<br>22 ಕಿ. ಮೀ. (ಓಊ 169)<br>3. ಇತರೆ ರಸ್ತೆಗಳ ಉದ್ದ: 1230ಕಿ. ಮೀ.<br><br>4. ಒಟ್ಟುವಾಹನಗಳ ಸಂಖ್ಯೆ :338032<br><br>5. ದ್ವಿಚಕ್ರವಾಹನ ಸಂಖ್ಯೆ :124478<br><br>6. ತ್ರಿಚಕ್ರವಾಹನ ಸಂಖ್ಯೆ :7150<br><br>7. ಕಾರು/ಜೀಪುಗಳ ಸಂಖ್ಯೆ :27194<br><br>8. ಲಾರಿಗಳ ಸಂಖ್ಯೆ :6233 |
| | |
| 10 | **ಬ್ಯಾಂಕುಗಳ ವಿವರ.**<br><br>1. ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಸಂಖ್ಯೆ :187<br><br>2. ಗ್ರಾಮೀಣಬ್ಯಾಂಕುಗಳ ಶಾಖೆಗಳ ಸಂಖ್ಯೆ :15<br><br>3. DCC ಬ್ಯಾಂಕುಗಳ ಶಾಖೆಗಳ ಸಂಖ್ಯೆ :26 |

| | |
|---|---|
| | 4. PCARDಬ್ಯಾಂಕುಗಳ ಶಾಖೆಗಳ ಸಂಖ್ಯೆ :34<br>5. ಖಾಸಗಿ ಬ್ಯಾಂಕುಗಳ ಶಾಖೆಗಳ ಸಂಖ್ಯೆ : 36<br>6. ಅಗ್ರಣೀಯ ಬ್ಯಾಂಕಿನ ಹೆಸರು :ಕೆನರಾ ಬ್ಯಾಂಕ್ |
| | |
| 11 | **ಸಂಪರ್ಕ ಸೌಕರ್ಯಗಳ ವಿವರ.**<br>1. ಅಂಚೆ ಕಛೇರಿಗಳ ಸಂಖ್ಯೆ : 335<br>2. ಸ್ಥಿರ ದೂರವಾಣಿಗಳ ಸಂಖ್ಯೆ :0820-2520628<br>3. ಮೊಬೈಲ್‌ಗಳ ಸಂಖ್ಯೆ :0820-2520217 |
| | |
| 12 | **ವಿದ್ಯುತ್ ಸೌಕರ್ಯ.ಮಂಗಳೂರುವಿದ್ಯುತ್ಸರಬರಾಜುಕಂಪೆನಿನಿಯಮಿತ**<br>1. ಬಳಕೆಯಾಗುತ್ತಿರುವ ವಿದ್ಯುತ್ :118mv<br>2. ಜಿಲ್ಲೆಗೆ ಪೂರೈಕೆಯಾಗುತ್ತಿರುವ ವಿದ್ಯುತ್: 300mv |
| | |
| 13 | **ಸಣ್ಣಕೈಗಾರಿಕೆಗಳ ವಿವರ.**<br>1. ಒಟ್ಟು ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳ ಸಂಖ್ಯೆ :11283<br>2. ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ : 6<br>3. ಬೃಹತ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ : 6<br>4. ಜಿಲ್ಲೆಯಲ್ಲಿರುವಒಟ್ಟುಕೈಗಾರಿಕಾ ಪ್ರದೇಶಗಳ ಸಂಖ್ಯೆ : 4<br>5. ಜಿಲ್ಲೆಯಲ್ಲಿರುವಕೈಗಾರಿಕಾ ವಸಾಹತುಗಳ ಸಂಖ್ಯೆ : 3 |
| | |
| 14 | **ಮಾರುಕಟ್ಟೆ ಸೌಕರ್ಯ**<br>1. ಸಗಟು ಮಾರುಕಟ್ಟೆಗಳ ಸಂಖ್ಯೆ : 2<br>2. ಗೋದಾಮುಗಳ ವಿವರ :ಕರ್ನಾಟಕರಾಜ್ಯಉಗ್ರಾಣನಿಗಮ, ಭಾರತದಆಹಾರಸಂಯೋಜನೆ<br>ಸಂಖ್ಯೆ : 3<br>ಸಾಮರ್ಥ್ಯ:2500 tonn<br>3. ಶೈತ್ಯಾಗಾರಗಳ ವಿವರ |

ಸಂಖ್ಯೆ : 1

ಸಾಮರ್ಥ್ಯ :400 tonn

4. ಸರಕು ಸಾಗಾಣಿಕಾ ವಾಹನಗಳ ಸಂಖ್ಯೆ :6233

15 ಜಿಲ್ಲೆಯಲ್ಲಿಯಸಂಪನ್ಮೂಲಗಳ ವಿವರ.

1. **ಕೃಷಿ ಸಂಪನ್ಮೂಲ.**

ಜಿಲ್ಲೆಯಲ್ಲಿಐದು ಪ್ರಮೂಖ ಬೆಳೆಗಳ ವಿವರ

| ಕ್ರ.ಸಂ | ಕೃಷಿ ಉತ್ಪನ್ನಗಳ ವಿವರ | ಬೆಳೆಯುತ್ತಿರುವ ಕ್ಷೇತ್ರಹೆಕ್ಟೇರಗಳಲ್ಲಿ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|---|
| 1 | ಭತ್ತ | 993 | 23.95 |
| 2 | ಕರಿ ಮೆಣಸು | 692 | 20.51 |
| 3 | ಕಬ್ಬು | 452 | 8.24 |
| 4 | ಎಳ್ಳು | 236 | 5.12 |
| 5 | ಹುರುಳಿಕಾಳು | 680 | 20.58 |

2. **ತೋಟಗಾರಿಕೆ ಹಣ್ಣುಗಳ (ತರಕಾರಿ, ಪುಷ್ಪೋದ್ಯಮ, ನೆಡುತೋಪು).**

ಅ. ಜಿಲ್ಲೆಯಲ್ಲಿಐದು ಪ್ರಮುಖ ಹಣ್ಣುಗಳವಿವರ.

| ಕ್ರ.ಸಂ | ತೋಟಗಾರಿಕೆ ಉತ್ಪನ್ನಗಳ ವಿವರ | ಬೆಳೆಯುತ್ತಿರುವ ಕ್ಷೇತ್ರ ಹೆಕ್ಟೇರಗಳಲ್ಲಿ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|---|
| 1 | ಅಡಿಕೆ | 46123 | 10.5 |
| 2 | ತೆಂಗಿನ ಕಾಯಿ | 36699 | 9.8 |
| 3 | ಮಾವು | 26012 | 7.8 |
| 4 | ಬಾಳೆಹಣ್ಣು | 18210 | 7.2 |
| 5 | ಹಲಸಿನ ಹಣ್ಣು | 13520 | 6.5 |

ಬ. **ತರಕಾರಿ**

ಜಿಲ್ಲೆಯಲ್ಲಿಐದು ಪ್ರಮುಖತರಕಾರಿ ಉತ್ಪನ್ನಗಳ ವಿವರ.

| ಕ್ರ.ಸಂ | ತರಕಾರಿ ಉತ್ಪನ್ನಗಳ ವಿವರ | ಬೆಳೆಯುತ್ತಿರುವ ಕ್ಷೇತ್ರ ಹೆಕ್ಟೇರಗಳಲ್ಲಿ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|---|
| 1 | ಕುಂಬಳ ಕಾಯಿ | 120 | 5.00 |
| 2 | ಮಲಬಾರ್ ಪಾಲಕ | 124 | 4.52 |
| 3 | ಮಟ್ಟುಗುಲ್ಲಾ | 165 | 3.58 |
| 4 | ಸೌತೆಕಾಯಿ | 78 | 2.45 |
| 5 | ಸಿಹಿ ಆಲೂಗಡ್ಡೆ | 78 | 2.12 |

ಕ. **ಪುಷ್ಪೋದ್ಯಮ.**

ಜಿಲ್ಲೆಯಲ್ಲಿಐದು ಪ್ರಮುಖ ಪುಷ್ಪೋದ್ಯಮ ಉತ್ಪನ್ನಗಳ ವಿವರ.

| ಕ್ರ.ಸಂ | ಪುಷ್ಪೋದ್ಯಮ ಉತ್ಪನ್ನಗಳ ವಿವರ | ಬೆಳೆಯುತ್ತಿರುವ ಕ್ಷೇತ್ರ ಹೆಕ್ಟೇರಗಳಲ್ಲಿ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|---|
| 1 | ಶಂಕರಪುರ ಮಲ್ಲಿಗೆ | 1200 | 11987 |

ಡ. **ನೆಡುತೋಪು.**

ಜಿಲ್ಲೆಯಲ್ಲಿಐದು ಪ್ರಮುಖ ನೆಡುತೋಪು ಉತ್ಪನ್ನಗಳ ವಿವರ.

| ಕ್ರ.ಸಂ | ನೆಡುತೋಪು ಉತ್ಪನ್ನಗಳ ವಿವರ | ಬೆಳೆಯುತ್ತಿರುವ ಕ್ಷೇತ್ರ ಹೆಕ್ಟೇರಗಳಲ್ಲಿ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|---|
| 1 | ಅಡಿಕೆ | 46123 | 10.5 |
| 2 | ತೆಂಗಿನ ಕಾಯಿ | 36699 | 98 |
| 3 | ಕರಿ ಮೆಣಸು | 692 | 20.51 |
| 4 | ಭತ್ತ | 993 | 23.95 |
| 5 | ಗೋಡಂಬಿ | 254 | 8.52 |

3. **ಜಾನವಾರು/ ಪಶುಸಂಪತ್ತಿನ ಮಾಹಿತಿ.**

| ಕ್ರ.ಸಂ | ವಿವರ | ಸಂಖ್ಯೆ |
|---|---|---|
| 1 | ಹಸು | 252067 |
| 2 | ಎಮ್ಮೆಗಳು | 8846 |
| 3 | ಮೊಲ | 1396 |
| 4 | ಮೇಕೆ | 6600 |
| 5 | ಹಂದಿಗಳು | 3098 |

4. **ಅರಣ್ಯ ಉತ್ಪನ್ನಗಳು.**

| ಕ್ರ.ಸಂ | ವಿವರ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|
| 1 | ಜೇನು | 1690 |
| 2 | ಗೋಡಂಬಿ | 14567 |
| 3 | ಮಾವು | 8098 |
| 4 | ನೇರಳೆ | 3456 |
| 5 | ಹುಣಸೆಹಣ್ಣು | 5432 |

5. **ಖನಿಜ ಸಂಪತ್ತು**

ಜಿಲ್ಲೆಯಲ್ಲಿಐದು ಪ್ರಮುಖ ಖನಿಜಗಳು

| ಕ್ರ.ಸಂ | ವಿವರ | ಲಭ್ಯತೆ ಸ್ಥಳ | ಕ್ಷೇತ್ರ ಹೆಕ್ಟೇರಗಳಲ್ಲಿ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|---|---|
| 1 | ಸಿಲಿಕಾ ಮರಳು | ಕಡಲತೀರ | 12565 | 61406 |
| 2 | ಬಾಕ್ಸೈಟ್ | ಗುಡ್ಡ ಪ್ರದೇಶ | 13536 | 38300 |
| 3 | ಸಿಂಬೆ ಚಿಪ್ಪು | ಕಡಲತೀರ | 9874 | 998 |
| 4 | ಅವೆ ಮಣ್ಣು | ನದಿಯ ಬದಿ | 7654 | 3900 |

| | | | | |
|---|---|---|---|---|
| 5 | ಅಲಂಕಾರಿಕಕಲ್ಲು | ಗುಡ್ಡ ಪ್ರದೇಶ | 6542 | 674 |

6. **ಮೀನುಗಾರಿಕೆ ಹಾಗೂ ಸಾಗರ ಉತ್ಪನ್ನಗಳು**

ಜಿಲ್ಲೆಯಲ್ಲಿಐದು ಪ್ರಮುಖ ಸಾಗರ ಸಂಪನ್ಮೂಲ

| ಕ್ರ.ಸಂ | ವಿವರ | ಉತ್ಪಾದನೆ (ಮೆಟ್ರಿಕ್.ಟನ್‌ಗಳಲ್ಲಿ) |
|---|---|---|
| 1 | ಹೆಪ್ಪುಗಟ್ಟಿದ ಮೀನು | 24509 |
| 2 | ಹಸಿ ಮೀನು | 23456 |
| 3 | ಮೀನು ಉಪ್ಪಿನಕಾಯಿ | 12456 |
| 4 | ಒಣ ಮೀನು | 21098 |
| 5 | ಮಿನಿನ ಎಣ್ಣೆ | 18098 |

7. **ಮಾನವ ಸಂಪನ್ಮೂಲ.**

I. ಜಿಲ್ಲೆಯಲ್ಲಿರುವತಾಂತ್ರಿಕ ವಿದ್ಯಾಲಯಗಳ ವಿವರ (ಇಂಜಿನಿಯರಿಂಗ್/ಪಾಲಿಟೆಕ್ನಿಕ್/ ಐಟಿಐ )

| ಕ್ರ.ಸಂ | ವಿದ್ಯಾಲಯದ ಹೆಸರು | ವಿದ್ಯಾರ್ಥಿ ಪ್ರವೇಶ ಸಂಖ್ಯೆ |
|---|---|---|
| 1 | ಎಂ ಐಟಿ ಕಾಲೇಜು ಮಣಿಪಾಲ | 2500 |
| 2 | ನಿಟ್ಟೆಕಾಲೇಜು ಕಾರ್ಕಳ | 1800 |
| 3 | ಟಿ ಎಂ ಪಾಯ್ ಪಾಲಿಟೆಕ್ನಿಕ್ ಮಣಿಪಾಲ | 1700 |
| 4 | ವಾದಿರಾಜಇಂಜಿನಿಯರಿಂಗ್‌ಕಾಲೇಜು | 650 |
| 5 | ಸರ್ಕಾರಿ ಪಾಲಿಟೆಕ್ನಿಕ್‌ಕಾಲೇಜು ಮಣಿಪಾಲ | 540 |

II ವೈದ್ಯಕೀಯಕಾಲೇಜು(ಅಲೋಪತಿ/ ಆಯುರ್ವೇದ/ಹೋಮಿಯೋಪತಿ/ಯುನಾನಿ/ಫಾರ್ಮಸಿ/ನರ್ಸಿಂಗಗಳ ವಿವರ)

| ಕ್ರ.ಸಂ | ವಿದ್ಯಾಲಯದ ಹೆಸರು | ವಿದ್ಯಾರ್ಥಿ ಪ್ರವೇಶ ಸಂಖ್ಯೆ |
|---|---|---|
| 1 | ಕೆ ಎಂ ಸಿ ಆಸ್ಪತ್ರೆ ಮಣಿಪಾಲ | 850 |
| 2 | ಎಸ್ ಡಿ ಎಂ ಆಯುರ್ವೇದಕಾಲೇಜುಉದ್ಯಾವರ | 450 |
| 3 | ಮುನಿಯಾಲುಆಯುರ್ವೇದಕಾಲೇಜು ಮಣಿಪಾಲ | 350 |
| 4 | ನಗರಆಸ್ಪತ್ರೆ ನರ್ಸಿಂಗ್ ಕಾಲೇಜು | 150 |
| 5 | ಕೆ ಎಂ ಸಿ ನರ್ಸಿಂಗ್ ಕಾಲೇಜು ಮಣಿಪಾಲ | 400 |

IIIಇತರೆ ಕಾಲೇಜುಗಳ ವಿವರ.

| ಕ್ರ.ಸಂ | ವಿದ್ಯಾಲಯದ ಹೆಸರು | ವಿದ್ಯಾರ್ಥಿ ಪ್ರವೇಶ ಸಂಖ್ಯೆ |
|---|---|---|
| 1 | ಎಂ ಜಿ ಎಂ ಕಾಲೇಜುಉಡುಪಿ | 400 |
| 2 | ಪಿ ಪಿ ಸಿ ಕಾಲೇಜುಉಡುಪಿ | 400 |
| 3 | ಎಸ್ ಎಂ ಎಸ್‌ಕಾಲೇಜುಉಡುಪಿ | 400 |
| 4 | ಭಂಡಾರ್ಕಾರ್ಸ್‌ಕಾಲೇಜುಕುಂದಾಪುರ | 400 |
| 5 | ಭುವನೇಂದ್ರಕಾಲೇಜು ಕಾರ್ಕಳ | 400 |
| 6 | ವಿಜಯಾಕಾಲೇಜು ಮುಲ್ಕಿ | 400 |
| | | |

8 .ಜಿಲ್ಲೆಯಐದು ಪ್ರಮುಖ ಪ್ರವಾಸಿ ತಾಣಗಳ ವಿವರ.

1. ಕೃಷ್ಣ ಮಠಉಡುಪಿ
2. ಮಲ್ಪೆ ಬೀಚ್
3. ಮರವಂತೆ ಬೀಚ್
4. ಕಾಪು ಲೈಟ್ ಹೌಸ್
5. ಕೊಲ್ಲೂರುದೇವಸ್ಥಾನ

9. ಕುಶಲಕರ್ಮಿ/ ಕಸಬುದಾರರ ವಿವರ.

| ಕ್ರ.ಸಂ | ಕಸಬು/ಕುಶಲಕರ್ಮಿಚಟುವಟಿಕೆ | ಕುಶಲಕರ್ಮಿಗಳ ಸಂಖ್ಯೆ | ಉತ್ಪನಗಳಿಗೆ ಇರುವ ಪ್ರಸ್ತುತ ಮಾರುಕಟ್ಟೆ |
|---|---|---|---|
| 1 | ಬುಟ್ಟಿತಯಾರಿಕೆ | 172 | ಅಂಗಡಿ |
| 2 | ಖಾದಿ ಬಟ್ಟೆಗಳು | 15 | ಅಂಗಡಿ |
| 3 | ಮರದ ಕೆಲಸ | 980 | ಅಂಗಡಿ |
| 4 | ಕಮ್ಮರಿಕೆ | 172 | ಅಂಗಡಿ |

10. ಜಿಲ್ಲೆಯ ಉದ್ಯಮಗಳ ವಿವರ.

(i) ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳ ವಿವರ

| ಕ್ರ.ಸಂ | ತಾಲ್ಲೂಕು | ಉದ್ಯಮಗಳ ಸಂಖ್ಯೆ | ಒಟ್ಟು ಬಂಡವಾಳ ಹೂಡಿಕೆ | ಉದ್ಯೋಗಗಳ ಸಂಖ್ಯೆ |
|---|---|---|---|---|
| 1 | ಉಡುಪಿ | 3203 | 72657 lakh | 18021 |
| 2 | ಕಾರ್ಕಳ | 1093 | 32657 lakh | 3200 |
| 3 | ಕುಂದಾಪುರ | 500 | 18657 lakh | 2825 |
| 4 | ಹೆಬ್ರಿ | 652 | 23657 lakh | 3245 |
| 5 | ಕಾಪು | 1345 | 51657 lakh | 5210 |
| | ಒಟ್ಟು | 6793 | 199285 lakh | 32501 |

(ii) ಮದ್ಯಮ ಹಾಗೂ ಬೃಹತ ಕೈಗಾರಿಕೆಗಳ ವಿವರ.

| ಕ್ರ.ಸಂ | ಉದ್ಯಮದ ಹೆಸರು | ಉತ್ಪನ್ನ | ಪ್ರಾರಂಭಿಸಿದ ವರ್ಷ | ಬಂಡವಾಳ ಹೂಡಿಕೆ | ಉದ್ಯೋಗಗಳ ಸಂಖ್ಯೆ |
|---|---|---|---|---|---|
| 1 | ರೋಬೋಸೋಫ್ಟ್‌ಟೆಕ್ನಾಲಜೀಸ್ | ಸಾಫ್ಟ್ೇರ್ | 1996 | 100 ಋಡಿ | 650 |
| 2 | ಸುಜ್ಲಾನ್ | ಗಾಳಿ ವಿದ್ಯುತ್‌ಯಂತ್ರ | 1995 | 250 ಋಡಿ | 350 |
| 3 | ಲ್ಯಾಮಿನಾ ಫೌಂಡೀಲಿಸ್ | ಫೌಂಡ್ರಿಗಳು | 1983 | 150 ಋಡಿ | 350 |
| 4 | ಮಣಿಪಾಲ ಗ್ರೂಪು | ಮುದ್ರಣಾಲಯ | 2000 | 100 ಋಡಿ | 950 |

(iii) ಜಿಲ್ಲೆಯಲ್ಲಿ ಸ್ಥಾಪಿಸಬಹುದಾದ ಉದ್ಯಮಗಳ ಪಟ್ಟಿ.

| ಕ್ರ.ಸಂ | ಉದ್ಯಮಗಳ ವಿವರ |
|---|---|
| 01 | **ಆಹಾರ ಹಾಗೂ ಕೃಷಿ ಆಧಾರಿತ ಉದ್ಯಮಗಳು** |
| | ಕುಚ್ಚಲ ಅಕ್ಕಿ ತಯಾರಿಕೆ |
| | ಗೋಡಂಬಿ ತಾಯಲಿಕೆ |
| | ಸಕ್ಕರೆತಾಯಲಿಕೆ |
| 02 | **ಜವಳಿ** |
| | ಟೈಲರಿಂಗ್ |
| | ಉಡುಪುಗಳು ತಾಯಲಿಕೆ |
| 03 | **ಪ್ರಿಂಟಿಂಗ ಹಾಗೂ  ಸ್ಟೇಷನರಿ.** |

| | |
|---|---|
| | ಆಫ್ ಸೆಟ್ ಪ್ರಿಂಟ್ |
| | ಬ್ಯಾನರ್ |
| | ಆಮಂತ್ರಣಗಳು |
| 04 | **ಪ್ಲಾಸ್ಟಿಕ, ರಬ್ಬರ್ ಹಾಗೂ ಚರ್ಮಾದಾರಿತ ಉದ್ಯಮ** |
| | ಪೈಪ್ ಮತ್ತುಟ್ಯಾಂಕ್ |
| | ಟೈರ್‌ರಿಸಲ್ |
| 05 | **ರಾಸಾಯಿನಿಕ ಉತ್ಪನ್ನಗಳು.** |
| | ಸಿಲಿಕಾನ್ |
| 06 | **ಕಟ್ಟಡ ಸಾಮಗ್ರಿ, ಸಿರ್‍ಯಾಮಿಕ್ ಉದ್ಯಮಗಳು.** |
| | ಹೈಲಾವ್ ಬ್ಲಾಕ್ |
| | ಮನ್ನಿನಾ ಬ್ಲಾಕ್ |
| | ಕಟ್ಟಡ ಸಾಮಗ್ರಿಗಳ ಅಂಗಡಿ |
| 07 | **ಜನರಲ್ ಇಂಜಿನೀಯರಿಂಗ ಹಾಗೂ ಪೂರಕ ಉದ್ಯಮಗಳು.** |
| | ಜನರಲ್‌ಇಂಜಿನೀಯರಿಂಗಮತ್ತು ವೆಲ್ಡಿಂಗ್ |
| | ರೋಪಿಂಗ್ ಕೆಲಸ |
| | ಲೆತ್ ವರ್ಕ್ |
| 08 | **ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ ಹಾಗೂ ಕಂಪ್ಯೂಟರ್ ಅಧಾರಿತ ಉದ್ಯಮಗಳು.** |
| | ಸಾಫ್ಟ್‌ವೇರ್ ಕಂಪನಿ |
| | ಟಿವಿ ಬೋರ್ಡ್‌ರಿಪೇರಿಅಂಗಡಿ |
| 09 | **ಅಟೋಮೋಬೈಲ ಉದ್ಯಮ.** |
| | ವೆಹಿಕಲ್‌ಕಾರ್ಬನ್ ಡಿ ಕ್ಯಾಂಪ್ರೆಸ್ |
| | ವೀಲ್‌ಯೆಲೈನ್ ಮೆಂಟ್ |
| | ಹೈಟೆಕ್‌ಗ್ಯಾರೇಜ್ |
| | ಟೈರ್‌ಅಂಗಡಿ |
| 10 | **ಜಾಬ ವರ್ಕ, ರಿಪೇರಿ ಹಾಗೂ ಇತರೆ ಉದ್ಯಮಗಳು.** |
| | ಉಡುಪುಗಳು ತಾಯರಿಕೆ |
| | ಟಿವಿ ಬೋರ್ಡ್‌ರಿಪೇರಿಅಂಗಡಿ |

(iv) ಜಿಲ್ಲೆಯಲ್ಲಿಯಕೈಗಾರಿಕಾ ಪ್ರದೇಶ (ಕೆ.ಐ.ಎ.ಡಿ.ಬಿ.) ವಿವರ:

| ಕ್ರ ಸಂ | ಕೈಗಾರಿಕಾ ಪ್ರದೇಶದ ಹೆಸರು ಹಾಗೂ ಸ್ಥಳ | ಸ್ಥಾಪನೆ ವರ್ಷ | ಸ್ವಾಧೀನ ಪಡಿಸಿದ ಭೂಮಿ (ಎಕರೆ) | ಅಭಿವೃದ್ಧಿ ಪಡಿಸಿದ ಭೂಮಿ (ಎಕರೆ) | ನಿರ್ಮಿಸಿದ ನಿವೇಶನಗಳು | ಹಂಚಿಕೆಯಾದ ನಿವೇಶನಗಳು |
|---|---|---|---|---|---|---|
| 1 | ಶಿವಳ್ಳಿ ಕೈಗಾರಿಕಾಪ್ರದೇಶ ಮಣಿಪಾಲ | 1982 | 90 | 90 | 96 | 92 |
| 2 | ನಂದಿಕೂರುಕೈಗಾರಿಕಾ ಪ್ರದೇಶ ಪಡುಬಿದ್ರಿ | 2013 | 65 | 42 | 62 | 58 |
| 3 | ಬೆಳಪು ಕೈಗಾರಿಕಾ ಪ್ರದೇಶಉಚ್ಚಿಲ | 2016 | 37 | 37 | 45 | 44 |
| 4 | ಕಾರ್ಕಳ ಕೈಗಾರಿಕಾ ಪ್ರದೇಶ | 2017 | 20 | 20 | 26 | 26 |

| | | | | | | | |
|---|---|---|---|---|---|---|---|
| | ಕಾರ್ಕಳ | | | | | | |

ಜಿಲ್ಲೆಯಲ್ಲಿಯಕೈಗಾರಿಕಾ ವಸಾಹತುಗಳ ವಿವರ.

| ಕ್ರ. ಸಂ | ಕೈಗಾರಿಕಾ ವಸಾಹತು ಹೆಸರು ಹಾಗೂ ಸ್ಥಳ | ಪ್ರಾರಂಭದ ವರ್ಷ | ವಿಸ್ತೀರ್ಣ (ಎಕರೆ) | ನಿರ್ಮಿಸಿದ ಮಳಿಗೆಗಳು | ಹಂಚಿಕೆಯಾದ ಮಳಿಗೆಗಳು | ನಿರ್ಮಿಸಿದ ನಿವೇಶನಗಳು | ಹಂಚಿಕೆಯಾದ ನಿವೇಶನಗಳು |
|---|---|---|---|---|---|---|---|
| 1 | ಶಿವಳ್ಳಿ ಕೈಗಾರಿಕಾ ವಸಾಹತು ಮಣಿಪಾಲ | 1982 | 12.91 | 56 | 56 | 23 | 23 |
| 2 | ಕಾರ್ಕಳ ಕೈಗಾರಿಕಾ ವಸಾಹತು ಕಾರ್ಕಳ | 1978 | 10 | 10 | 10 | 18 | 18 |
| 3 | ಕೋಟೇಶ್ವರ ಕೈಗಾರಿಕಾ ವಸಾಹತು ಕುಂದಾಪುರ | 1990 | 6.02 | 20 | 20 | 12 | 12 |

**ಜಿಲ್ಲೆಯಲ್ಲಿರುವ ನವೀಕರಿಸಬಹುದಾದ ವಿದ್ಯುತ್( ಸೌರ ಹಾಗೂ ಪವನ)ಸ್ಥಾವರಗಳ ವಿವರ:**

| ಕ್ರ. ಸಂಖ್ಯೆ | ಘಟಕದ ಹೆಸರು ಹಾಗೂ ಸ್ಥಳ | ಸ್ಥಾಪನೆ ವರ್ಷ | ಉತ್ಪಾದನಾ ಸಾಮರ್ಥ್ಯ |
|---|---|---|---|
| 1 | ಅದಾನಿ ಉಡುಪಿ ಪವರ್‌ಕಾರ್ಪೋರೇಷನ್ ಲಿಮಿಟೆಡ್ | 2010 | 1200 mw |

**ಜಿಲ್ಲೆಯಲ್ಲಿ ಉದ್ಯಮಗಳ ಸ್ಥಾಪನೆಗೆ ಸಂಬಂಧಸಿದ ಇಲಾಖೆ/ ಸಂಸ್ಥೆಗಳ ವಿವರ**

| ಕ್ರ.ಸಂ | ವಿವರ | ವಿಳಾಸ ಹಾಗೂ ದೂರವಾಣಿ ಸಂಖ್ಯೆ | ಇಮೇಲ್ |
|---|---|---|---|
| 01 | ಜಂಟಿನಿರ್ದೇಶಕರು, ಜಿಲ್ಲಾಕೈಗಾರಿಕಕೇಂದ್ರ | ಜಂಟಿ ನಿರ್ದೇಶಕರಕಚೇರಿ, ಜಿಲ್ಲಾ ಕೈಗಾರಿಕೆಗಳ ಕೇಂದ್ರ, # 36-ಸಿ, ಶಿವಾಲ್ ಇಂಡ್ ಪ್ರದೇಶ, ಅಲೆವೂರುರಸ್ತೆ, ಮಣಿಪಾಲ ಉಡುಪಿ -576106 0820- 2575650 | jddicudupi@gmail.com |
| 02. | ಜಂಟಿನಿರ್ದೇಶಕರು, ಸಿಡಾಕ್ | 1 ಮಹಡಿಜಂಟಿ ನಿರ್ದೇಶಕರಕಚೇರಿ, ಜಿಲ್ಲಾ ಕೈಗಾರಿಕೆಗಳ ಕೇಂದ್ರ, # 36-ಸಿ, ಶಿವಾಲ್ ಇಂಡ್ ಪ್ರದೇಶ, ಅಲೆವೂರುರಸ್ತೆ, ಮಣಿಪಾಲ ಉಡುಪಿ -576106 9844700937 | cedokudupi@gmail.com |
| 03. | ವ್ಯಸ್ಥಾಪಕರು ಲೀಡ್ ಬ್ಯಾಂಕ್ | ಉಡುಪಿ ಲೀಡ್‌ಆಫೀಸ್, ಸಿಂಡಿಕೇಟ್ ಟವರ್ಸ್, ಮೊದಲ ಮಹಡಿ, ಕೆ ಎಂ ಮಾರ್ಗ್, ಪಿನ್: 576 101, ಉಡುಪಿ ನಗರ: ಉಡುಪಿ ಜಿಲ್ಲೆ: | ka.0237udpro@syndicatebank.co.in |

| | | | |
|---|---|---|---|
| | | 9449860858 | |
| 04. | ಕರ್ನಾಟಕರಾಜ್ಯ ಹಣಕಾಸು ಸಂಸ್ಥೆ | 3 ನೇ ಮಹಡಿ, ಅನಂತಟವರ್ಸ್, ಕೋರ್ಟ್ರಸ್ತೆ, ಉಡುಪಿ -576 101. 0820-2524033 | udp@ksfc.co |
| 05. | ನಬಾರ್ಡ | ಫ್ಲಾಟ್ ನಂ .201 ಮೊಸಾಕಾ ಅಪಾರ್ಟ್ಮೆಂಟ್ಗಳು, ನೆಹರೂಅವೆನ್ಯೂಕ್ರಾಸ್ರಸ್ತೆ, ಲಾಲ್ ಬಾಗ್, ಮಂಗಳೂರು -575003 0824-2984481 / 8547702196 | dakshinakannada@nabard.org |
| 06. | ಕರ್ನಾಟಕಕೈಗಾರಿಕಾಪ್ರದೇಶಅಭಿವೃದ್ಧಿ ಮಂಡಳಿ | ಬೈಕಂಪಾಡಿ ಇಂಡಸ್ಟ್ರಿಯಲ್ ಏರಿಯಾ, ನವ ಮಂಗಳೂರು-575 011 0824-2408160 | domangaluru@kiadb.in |
| 07. | ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ | ಕೆ ಎಸ್ಎಸ್ ಐ ಡಿ ಸಿ ಕಟ್ಟಡಕೊಂಚಡಿಕೈಗಾರಿಕಾ ಪ್ರದೇಶ ಮಂಗಳೂರು ದಕ್ಷಿಣಕನ್ನಡ 575008 8884415765 | Kssidcmng@gmail.com |
| 08. | ಕರ್ನಾಟಕ ಖಾದಿ ಹಾಗೂ ಗ್ರಾಮೋದ್ಯೋಗ ಮಂಡಳಿ | ಖಾದಿ ಗ್ರಾಮೋದ್ಯೋಗ ಮಂಡಳಿ ಎರಡನೇ ಮಹಡಿ ಡಿಸಿ ಕಚೇರಿ ಮಣಿಪಾಲ 576104 9480825639 | kvibudupi@gmail.com |
| 09. | ಉಪ ನಿರ್ದೇಕರು, ಖಾದಿಗ್ರಾಮೋದ್ಯೋಗಜಿಲ್ಲಾ ಪಂಚಾಯತ | ಖಾದಿ ಮತ್ತುಗ್ರಾಮೀಣಕೈಗಾರಿಕೆ ಮೊದಲ ಮಹಡಿ ಡಿಸಿ ಕಚೇರಿ ಮಣಿಪಾಲ 576104 0820-2574915 | ddkvi.udupi@gmail.com |
| 10. | ಜಿಲ್ಲಾಕೌಶಲ್ಯಅಭಿವೃದ್ಧಿಅಧಿಕಾರಿ | ಜಿಲ್ಲಾಕೌಶಲ್ಯ ಮಿಷನ್ಕಚೇರಿ, ಬಿ ಬ್ಲಾಕ್, ಮೊದಲ ಮಹಡಿ, ಜಿಲ್ಲಾ ಸಂಕೀರ್ಣ, ರಾಜತಾದ್ರಿ ಮಣಿಪಾಲ, ಉಡುಪಿ -576104 0820-2574869 | udupikaushalya@gmail.com |
| 11. | ಸಂಶೋಧನಾ ಕೇಂದ್ರಗಳು | ಸುಸಿ ಜಾಗತಿಕ ಸಂಶೋಧನಾಕೇಂದ್ರಉಡುಪಿ 98453 08233 | |
| 12 | ಉದ್ಯಮಶೀಲತಾ ತರಬೇತಿ ಸಂಸ್ಥೆಗಳು | ನಿರ್ದೇಶಕ ರುಡ್ ಸೆಟ್ ಸಂಸ್ಥೆ, 52, ಹೇರೂರು ಬ್ರಹ್ಮಾವರ - 576 213 ಉಡುಪಿ ಜಿಲ್ಲೆ 0820 – 2563455 | rudbvr@gmail.com |
| 13 | ಪ್ರಯೋಗಾಲಯಗಳು( ಟೆಸ್ಟಿಂಗ್ ಲ್ಯಾಬರೋಟರಿಗಳು) | ಕೃಷಿ ವಿಜ್ಞಾನಕೇಂದ್ರ, ಬ್ರಹ್ಮಾವರ, ಉಡುಪಿ 082009-2563923 | kvk.Udupi@icar.gov.in kvkudupi@gmail.com udupikvk@gmail.com |

| | | | |
|---|---|---|---|
| 14 | ಸೂಕ್ಷ್ಮ, ಸಣ್ಣ , ಮಾಧ್ಯಮ ಉದ್ಯಮಗಳ ಸಂಸ್ಥೆ (ಎಮ್.ಎಸ್.ಎಮ್.ಇ.ಡಿ.ಐ.) | ಎಂಎಸ್ ಎಂಇ ಕಚೇರಿ ಯೆಯ್ಯಾಡಿ, ಮಂಗಳೂರು, ಕರ್ನಾಟಕ 575016 0824-2217696 | brmngsisi@dataone.in |
| 15 | ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ (ಎನ್.ಎಸ್.ಐ.ಸಿ.) | -- | -- |
| 16 | ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ | ರೈಲ್ವೆಗೋಡೌನ್‌ರಸ್ತೆ, ಇಂದ್ರಾಳಿ, ಇಂದಿರಾ ನಗರ, ಉಡುಪಿ, ಕರ್ನಾಟಕ 576104 0820 252 0251 | udupichamber@gmail.com |
| 17 | ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ | ಪ್ಲಾಟ್ ನಂ .36 (ಪಿ, ಶಿವಳ್ಳಿ, ಕೈಗಾರಿಕಾ ಪ್ರದೇಶ, ಮಣಿಪಾಲ, ಕರ್ನಾಟಕ 576119 0820 257 5544 | dsiaudupi@gmail.com |
| 18 | ಜಿಲ್ಲೆಯಲ್ಲಿರುವಇತರ ಸಣ್ಣ ಕೈಗಾರಿಕೆಗಳ ವಿವರ | ಮಣಿಪಾಲ ಕರ್ನಾಟಕ ಸರ್ಕಾರ ಬಯೋಇಂಕ್ಯೂಬೇಟರ್ 3 ನೇ ಮಹಡಿ, ಎಂಎಮ್ಎಸಿ ಹಿಂಭಾಗದಲ್ಲಿ ಒಂಊಇ ಸುಧಾರಿತಸಂಶೋಧನಾಕೇಂದ್ರ, ಮಣಿಪಾಲ, ಕರ್ನಾಟಕ 576104 0820-2937724 | manipal.gokbioincubator@gmail.com |
| 19 | ಇತರೆ | ಎಂ ಯು ಟಿ ಬಿ ಐ, 4 ನೇ ಮಹಡಿ, ಮಣಿಪಾಲ ಸುಧಾರಿತ ಸಂಶೋಧನಾಕೇಂದ್ರ, ಮಾಧವ್ ನಗರ, ಮಣಿಪಾಲ, ಕರ್ನಾಟಕ 576104 0820 2925051 | mutbi.mit@manipal.edu |